ಕುಂದಾಪುರದಲ್ಲಿ ಮಿನಿ ವಿಧಾನ ಸೌಧ

2320 -ಶ್ರೀ ಐ.ಎಂ. ಜಯರಾಮರೆಡ್ಡಿ (ಬೈಂದೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ಎಷ್ಟು ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಇವೆ, (ಇಲಾಖಾವಾರು ಕಛೇರಿಗಳ ವಿವರ ಒದಗಿಸುವುದು)

ಆ) ಈ ಕಛೇರಿಗಳಿಗೆ ತಿಂಗಳೊಂದಕ್ಕೆ ಕೊಡುವ ಬಾಡಿಗೆ ಹಣವೆಷ್ಟು?

ಇ) ಸರ್ಕಾರಕ್ಕೆ ಬಾಡಿಗೆ ಹಣ ಉಳಿಸುವ ದೃಷ್ಠಿಯಿಂದ ಮತ್ತು ಸಾರ್ವಜನಿಕರಿಗೆ ಒಂದು ಕಡೆ ಎಲ್ಲಾ ಕಛೇರಿಗಳ ಸೌಲಭ್ಯ ಸಿಗುವ ದೃಷ್ಟಿಯಿಂದ ಈಗಿರುವ ಉಪ ವಿಭಾಗಾಧಿಕಾರಿಗಳ ಕಛೇರಿ ಆವರಣದಲ್ಲಿ ಮಿನಿ ವಿಧಾನ ಸೌಧ ಕಟ್ಟುವ ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹನ್ನೊಂದು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಇವೆ

1)	ರೇಷ್ಮೆ ವಿಸ್ತರಣಾಧಿಕಾರಿ ಕಛೇರಿ, ಕುಂದಾಪುರ	1,999.00
2)	ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ	4,950.00
3)	ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಕಛೇರಿ	350.00
4)	ತಾಲ್ಲೂಕು ಕೈಗಾರಿಕಾ ಕೇಂದ್ರ ಕಛೇರಿ	2,400.00
5)	ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ	3,000.00
6)	ಕೋ-ಆಪರೇಟಿವ್ ಸಹಾಯಕ ರಿಜಿಸ್ಟ್ರಾರ್ ಕಛೇರಿ	1,000.00
7)	ಉದ್ಯೋಗ ವಿನಿಮಯ ಕಛೇರಿ	1,200.00
8)	ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ	9,800.00
9)	ಕಾರ್ಮಿಕ ಇಲಾಖೆ ಕಛೇರಿ	100.00
10)	ಸಾಮಾಜಿಕ ಅರಣ್ಯಾಧಿಕಾರಿಗಳ ಕಛೇರಿ	710.00
11)	ವನ್ಯ ಜೀವಿ ಸಂರಕ್ಷಣಾ ಕಛೇರಿ	1,470.00
	ಒಟ್ಟು	**21,970.00**

ಆ) 21,970.00 ರೂ.ಗಳು

ಇ) ಪ್ರಸ್ತುತ ಇರುವುದಿಲ್ಲ.